# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 204/2017

(ಪ್ರಾಸಾ-1 ಚಾಸಾ-1 )
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ದಿಃ23.03.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಮುನಿಬೈರಪ್ಪ, |
| ತಂದೆಯ/ಗಂಡನ ಹೆಸರು | - | ಮುನಿಯಪ್ಪ, |
| ವಯಸ್ಸು | - | 48 ವರ್ಷ, |
| ಉದ್ಯೋಗ | - | ಸೆಕ್ಯೂರಿಟಿ, |
| ವಾಸ | - | ಇಟಗಲ್ ಪುರ, ಬೆಂಗಳೂರು ಉತ್ತರ. |

## ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

ಚಾಸಾ-2 ರಿಂದ 5 ಗೊತ್ತು. ನಾನು, ಚಾಸಾ-2 ಮತ್ತು 3 ಪರಿಶಿಷ್ಟ ಜಾತಿಯ ಮಾದಿಗ ಜಾತಿಗೆ ಸೇರಿದವರು. ಚಾಸಾ-4 ಮತ್ತು 5 ಕುರುಬ ಜಾತಿಗೆ ಸೇರಿದವರು. ಆರೋಪಿಗಳು ಗೊತ್ತು. ನ್ಯಾಯಾಲಯದ ಮುಂದೆ ಹಾಜರಿರುವ 1, 2, 4 ಮತ್ತು 5 ನೇ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು 3 ನೇ ಆರೋಪಿ ಹಾಜರಾತಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಆರೋಪಿ ಗುರುತಿಸುವಿಕೆಗಾಗಿ ತಮ್ಮ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

2. ನಾನು ಶ್ರೀರಾಮನಹಳ್ಳಿಯ ಗೃಹಲಕ್ಷ್ಮಿ ಹೌಸಿಂಗ್ ಸೊಸೈಟಿಯಲ್ಲಿ ಸೆಕ್ಯೂರಿಟಿಯಾಗಿ ಹಾಗೂ ವ್ಯವಸಾಯ ಮಾಡಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದೇನೆ. ನನ್ನನ್ನು ಚಾಸಾ-5 ರವರು ಸೆಕ್ಯೂರಿಟಿಯಾಗಿ ನೇಮಕ ಮಾಡಿಕೊಂಡಿದ್ದಾರೆ. ಚಾಸಾ-2 ರಿಂದ 4 ರವರು ಸದರಿ ಸೊಸೈಟಿಯಲ್ಲಿ ಸೆಕ್ಯೂರಿಟಿ ಕೆಲಸಗಾರರು.

3. ದಿ:24.07.2016 ರಂದು ಬೆಳಗ್ಗೆ 11.30 ರ ಸಮಯದಲ್ಲಿ ನಾನು ಹಾಗೂ ಚಾಸಾ-2 ರವರು ಊರಿನಿಂದ ಸೊಸೈಟಿಯ ಜಾಗದ ಹತ್ತಿರ ನೋಡಲು ಹೋಗಿದ್ದೆವು. 1 ನೇ ವೆಂಕಟೇಗೌಡ ಹಾಗೂ ಇನ್ನೂ ನಾಲ್ಕು ಜನರು ದೊಣ್ಣೆಯನ್ನು ಹಿಡಿದುಕೊಂಡು ನಿಂತಿದ್ದರು. 1 ನೇ ಆರೋಪಿ, ಏನೋ ಮಾದಿಗ ನನ್ನ ಮಕ್ಕಳಾ ಬೋಳಿ ನನ್ನ ಮಕ್ಕಳಾ ಏನಕ್ಕೋ ನಮ್ಮ ಜಮೀನಿನ ಹತ್ತಿರ ಬರುತ್ತೀರಾ ಎಂದು ಬೈದರು ನಾವು ಅವನ ಮಾತು ಕಿವಿಗೆ ಹಾಕಿಕೊಳ್ಳದೇ ಜಮೀನಿನ ಒಳಗೆ ಹೋದೆವು. ಇನ್ನೂ ನಾಲ್ಕು ಜನರು ದೊಣ್ಣೆ ಮತ್ತು ರಾಡುಗಳನ್ನು ಹಿಡಿದುಕೊಂಡಿದ್ದು 2 ನೇ ಆರೋಪಿಯು ನನಗೆ ದೊಣ್ಣೆಯಿಂದ ಹಣೆಯ ಮೇಲೆ ಹೊಡೆದನು. 3 ನೇ ಆರೋಪಿ ಚಾಸಾ-2 ರವರಿಗೆ ದೊಣ್ಣೆಗಳಿಂದ ಎಡಗಣ್ಣಿನ ಮೇಲೆ ಹೊಡೆದ ಮೇಲೆ ಹೊಡೆದನು ಚಾಸಾ-2 ರವರ ಮುಖ ಊದಿಗೊಂಡಿತ್ತು. ಉಳಿದವರು ನನಗೆ ಹಾಗೂ ಚಾಸಾ-2 ರವರಿಗೆ ಕೈಗಳಿಂದ ಹೊಡೆದರು. ಬೋಳಿ ನನ್ನ ಮಕ್ಕಳಾ, ಸೂಳೆ ನನ್ನ ಮಕ್ಕಳಾ, ಮಾದಿಗ ನನ್ನ ಮಕ್ಕಳಾ ಏನಕ್ಕೆ ಜಮೀನಿನ ಹತ್ತಿರ ಬರುತ್ತೀರಾ ನಾವೇ ಸರ್ವೆ ಮಾಡಿಕೊಳ್ಳುತ್ತೀವಿ ಎಂದು ಬೈದರು. ನಮಗೆ ಮತ್ತೆ ಹೊಡೆದರು. ನಿಮ್ಮನ್ನು ಹಾಗೇ ಬಿಟ್ಟರೇ ಆಗುವುದಿಲ್ಲ ನಿಮ್ಮನ್ನು ಕೊಲೆ ಮಾಡಿ ಬಾವಿಗೆ ಹಾಕುತ್ತೇವೆ ಎಂದು ಆರೋಪಿತರು ಕೊಲೆ ಬೆದರಿಕೆ ಹಾಕಿದರು. ಗಲಾಟೆಯನ್ನು ಚಾಸಾ-4 ಮತ್ತು 5 ರವರು ಬಂದು ಬಿಡಿಸಿ ಸಮಾಧಾನಪಡಿಸಿದರು. ನಮ್ಮನ್ನು ಯಲಹಂಕದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ನಾನು ದೂರು ನೀಡಿದ್ದೇನೆ. ಸಾಕ್ಷಿ ದೂರು ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿ

ಸಹಿಯನ್ನು ನಿಪಿ-1(ಎ) ಎಂದು ಗುರುತು ಮಾಡಲಾಯಿತು. ನಿಪಿ-1 ದೂರನ್ನು ರಾಮಕೃಷ್ಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ನೀಡಿದ್ದೇನೆ. ಆರೋಪಿತರು ಹಲ್ಲೆ ಮಾಡಿದ ದೊಣ್ಣೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮೂರು ದೊಣ್ಣೆಗಳನ್ನು ನೋಡಿ ಗುರುತಿಸಿದುದ ಅವುಗಳನ್ನು ಮು.ಮಾ.1 ರಿಂದ 3 ಎಂದು ಗುರುತು ಮಾಡಲಾಯಿತು.

**<u>ಪಾಟೀ ಸವಾಲು ಆರೋಪಿಗಳ ಪರ ವಕೀಲರಿಂದಃ ಶ್ರೀ ಎಂಆರ್</u>**

4. ನನ್ನ ಪೂರ್ಣ ಹೆಸರು ಮುನಿಭೈರಪ್ಪ. ನನ್ನ ಹೆಸರು ಮುನಿಭೈರಪ್ಪ ಎಂದು ತೋರಿಸುವ ದಾಖಲೆಯನ್ನು ಪೋಲಿಸರಿಗೆ ಕೊಟ್ಟಿದ್ದೇನೆ. ನನ್ನ ಹೆಸರನ್ನು ತೋರಿಸಲು ಆಧಾರ್ ಕಾರ್ಡಿನ ಪ್ರತಿ ಹಾಗೂ ಜಾತಿ ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ. ತಹಶೀಲ್ದಾರ್ ರವರು ನೀಡಿರುವ ಜಾತಿ ಪತ್ರದ ಪ್ರಕಾರ ನನ್ನ ಹೆಸರು ಮುನಿಬೈರಯ್ಯ ಎಂದರೆ ಸರಿಯಲ್ಲ. ಮುನಿಬೈರಯ್ಯ ನನ್ನ ಹೆಸರು ಅಲ್ಲ. ನನ್ನ ಹೆಸರು ಮುನಿಭೈರಪ್ಪ ಅಲ್ಲ ಮುನಿಬೈರಯ್ಯ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರಿಗೆ ನನ್ನ ಜನನ ದಾಖಲೆಯನ್ನು ಕೊಟ್ಟಿದ್ದೇನೆ.

5. ನಾನು ಹುಟ್ಟಿದಾಗಿನಿಂದಲೂ ಇಟಿಗಲ್ ಪುರದಲ್ಲಿ ವಾಸವಾಗಿದ್ದೇನೆ. ನಾನು ಬಿಎ ಪದವೀಧರ. ನಾನು ಪದವಿ ಮುಗಿಸಿರುವ ಕುರಿತಂತೆ ನನ್ನ ಹೇಳಿಕೆಯಲ್ಲಿ ದೂರಿನಲ್ಲಿ ಹೇಳಿರುವುದಿಲ್ಲ. ನನಗೆ ಕನ್ನಡ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನಿಪಿ-1 ದೂರನ್ನು ನಾನು ಬರೆದಿರುವುದಿಲ್ಲ. ನಿಪಿ-1 ದೂರಿನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

6. ನನ್ನ ಹೆಸರಿನಲ್ಲಿ ವ್ಯವಸಾಯದ ಜಮೀನು ಇರುವುದಿಲ್ಲ ಸಾಕ್ಷಿ ಮುಂದುವರಿದು ಸ್ವಲ್ಪ ಜಮೀನು ಇದೆ ಎಂದು ನುಡಿದಿರುತ್ತಾರೆ. ಜಮೀನಿನ ಸರ್ವೆ ನಂಬರ್ ಎಲ್ಲಿ ಇದೆ

ಎಂದರೆ ಸಾಕ್ಷಿಯು ಅದೆಲ್ಲಾ ಹೇಳಲು ಬರುವುದಿಲ್ಲ. ನ್ಯಾಯಾಲಯ ಪ್ರಶ್ನೆ ಕೇಳಲಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ನನಗೆ ಬುದ್ದಿ ಬಂದಾಗಿನಿಂದಲೂ ಅಂದರೆ 1988-89 ರಿಂದ ವ್ಯವಸಾಯ ಮಾಡುತ್ತಿದ್ದೇನೆ. ಜನಗಳಿಗೆ ಮೋಸ ಮಾಡಿ ಜೀವನ ಮಾಡುವುದೇ ನನ್ನ ವೃತ್ತಿ ಎಂದರೆ ಸರಿಯಲ್ಲ.

7. ನಾನು 1996 ರಿಂದ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದೇನೆ. 1996 ರಿಂದ ನಾನು ಲಯನ್ಸ್ ಸೆಕ್ಯೂರಿಟಿ, ಗೃಹಲಕ್ಷ್ಮಿ ಹೌಸಿಂಗ್ ಸೊಸೈಟಿಯಲ್ಲಿ ಸೆಕ್ಯೂರಿಟಿಯಾಗಿ ಕೆಲಸ ಮಾಡಿದ್ದೇನೆ. ಲಯನ್ಸ್ ಸೆಕ್ಯೂರಿಟಿಯಲ್ಲಿ ಯಾವ ಸಾಲಿನಲ್ಲಿ ಎಷ್ಟು ಕಾಲ ಕೆಲಸ ಮಾಡಿದ್ದೇನೆ ಎನ್ನುವುದು ಈಗ ನೆನಪಿಲ್ಲ. ಗೃಹಲಕ್ಷ್ಮಿ ಹೌಸಿಂಗ್ ಸೊಸೈಟಿಯಲ್ಲಿ ಸೆಕ್ಯೂರಿಟಿಯಾಗಿ ಎಂದಿನಿಂದ ಕೆಲಸ ಮಾಡುತ್ತಿದ್ದೀರಾ ಎಂದು ಕೇಳಿದಾಗ ಸಾಕ್ಷಿ ಯೋಚಿಸಿ 1996 ರಿಂದ ಅಲ್ಲಿಯೇ ಕೆಲಸ ಮಾಡುತ್ತಿದ್ದೇನೆ ಎಂದು ನಂತರ 2006 ರಿಂದ ಇರಬಹುದು ಎಂದು ಹೇಳುತ್ತಾರೆ. ಗೃಹಲಕ್ಷ್ಮಿ ಹೌಸಿಂಗ್ ಸೊಸೈಟಿಯಲ್ಲಿ ಕೆಲಸ ನಿರ್ವಹಿಸುವ ಕುರಿತಂತೆ ನಾನು ದಾಖಲಾತಿಗಳನ್ನು ಪೋಲಿಸರಿಗೆ ಕೊಟ್ಟಿದ್ದೇನೆ ಯಾವ ದಾಖಲಾತಿ ಕೊಟ್ಟಿದ್ದೇನೆ ಈಗ ನನಗೆ ನೆನಪಿಲ್ಲ. ಗೃಹಲಕ್ಷ್ಮಿ ಹೌಸಿಂಗ್ ಸೊಸೈಟಿಯವರು ನಾನು ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿರುವ ಕುರಿತಂತೆ ಗುರುತಿನ ಪತ್ರ, ಪಿಎಫ್ ಖಾತೆಯ ವಿವರ ದಾಖಲೆಗಳನ್ನು ನೀಡಿರುತ್ತಾರೆ. ಸದರಿ ದಾಖಲೆಗಳನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ಪೋಲಿಸರು ಪ್ರಕರಣದ ದಾಖಲೆಗಳ ಬಗ್ಗೆ ನನಗೆ ಓದಿ ಹೇಳಿದ್ದಾರೆ ಎಂದರೆ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ದಾಖಲೆಗಳನ್ನು ಪೋಲಿಸರು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಗೃಹಲಕ್ಷ್ಮಿ ಹೌಸಿಂಗ್ ಸೊಸೈಟಿಯಲ್ಲಿ ನಾನು ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿಲ್ಲ ಆದ್ದರಿಂದ ನಾನು ಯಾವುದೇ ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗುರುತಿನ ದಾಖಲೆಗಳನ್ನು ಪೋಲಿಸರು ನ್ಯಾಯಾಲಯಕ್ಕೆ ನೀಡಿರುವ ಕುರಿತಂತೆ

ದಾಖಲೆ ಇರುವುದೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಸಾಕ್ಷಿಗೆ ಕಡತವನ್ನು ತೋರಿಸಿ ನೋಡಿ ಹೇಳಲು ಕೇಳಲಾಗಿದ್ದು ಸಾಕ್ಷಿ ಕಡತವನ್ನು ಪರಿಶೀಲಿಸದೇ(ಕಡತದ ದಾಖಲೆಯನ್ನು ನೋಡಿರುವುದಿಲ್ಲ) ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನಾನು ವ್ಯವಸಾಯ ಮಾಡಿರುವ ಕುರಿತಂತೆಯೂ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ ನನ್ನ ಹೆಸರಿನಲ್ಲಿ ಪಹಣಿ ಇದೆ.

8. ನೀವು ದಲಿತ ಸಂಘರ್ಷ ಸಂಘದ ಸದಸ್ಯ ಅಥವಾ ಅಧ್ಯಕ್ಷ ಅಥವಾ ಇತರೆ ಯಾವುದೇ ಹುದ್ದೆಯನ್ನು ಹೊಂದಿದ್ದೀರಾ ಎಂದರೆ ಸಾಕ್ಷಿ ಅದು ನನ್ನ ವೈಯಕ್ತಿಕ ವಿಷಯ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ದಲಿತ ಸಂಘರ್ಷ ಸಂಘವನ್ನು ಕಟ್ಟಿಕೊಂಡು ನಮ್ಮ ಊರಿನಹಾಗೂ ಪಕ್ಕದ ಊರಿನ ಜನಗಳಲ್ಲಿ ಸಂಘದ ಹೆಸರನ್ನು ಬಳಕೆ ಮಾಡಿಕೊಂಡು ಜನರಿಂದ ಹಣವನ್ನು ಕಿತ್ತುಕೊಳ್ಳುವ ಕೆಲಸ ಮಾಡುತ್ತಿದ್ದೇನೆ ಎಂದರೆ ಸಾಕ್ಷಿ ದಾಖಲೆಯನ್ನು ತೋರಿಸಿ ಎಂದು ಹೇಳುತ್ತಾರೆ.

9. ನಾನು ಆರೋಪಿತರನ್ನು ಹೊರತು ಬೇರೆ ಯಾರ ಮೇಲೂ ಅಟ್ರಾಸಿಟಿ ಕಾನೂನಿನಲ್ಲಿ ಪ್ರಕರಣವನ್ನು ದಾಖಲಿಸಿರುವುದಿಲ್ಲ ನಾನು ಸುಮಸುಮ್ಮನೇ ಯಾರ ಮೇಲೆಯೂ ಪ್ರಕರಣ ದಾಖಲಿಸುವುದಿಲ್ಲ. ನೀವು ಸಾಕಷ್ಟು ಜನರ ಮೇಲೆ ಬೇರೆ ಬೇರೆ ಅಪರಾಧಗಳ ಮೇಲೆ ಬೇರೆ ಬೇರೆ ಪ್ರಕರಣಗಳನ್ನು ದಾಖಲಿಸಿರುತ್ತೀರ ಎಂದು ವಕೀಲರು ಪ್ರಶ್ನಿಸಿರುತ್ತಾರೆ ಸದರಿ ಪ್ರಶ್ನೆಯನ್ನು ಆರೋಪಿತರ ಮಾಹಿತಿಯ ಆಧಾರದ ಮೇಲೆ ನೀಡಲಾಗಿದೆಯೇ ಎಂದರೆ ಹೌದು ಎಂದು ವಕೀಲರು ಉತ್ತರಿಸುತ್ತಾರೆ.

10. ರಾಜಾನುಕುಂಟೆ ಪೋಲಿಸ್ ಠಾಣೆಯಲ್ಲಿ ಸಿಸಿ ನಂ.7891/2018 ಅನ್ನು ನೀವು ಯಾರ ಮೇಲೆ ದಾಖಲಿಸಿದ್ದೀರಾ ಎಂದರೆ ನೆನಪಿಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿ ಬೇರೆ ಪ್ರಕರಣಗಳನ್ನು ದಾಖಲಿಸಿರುವ ಕುರಿತಂತೆ ದಾಖಲೆಗಳನ್ನು ಹಾಜರುಪಡಿಸಿ ಮುಂದುವರಿದ ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಂಡು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೋಹನ ಬಾಡಗಂಡಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು